# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 401 (517) |
| ಉತ್ತರಿಸಬೇಕಾದ ಸಚಿವರು | : | ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 19-07-2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಕೃಷಿ ಮಹಾವಿದ್ಯಾಲಯ ಸ್ಥಾಪನೆಗೆ ಇರುವ ನಿಯಮಗಳೇನು; ರಾಜ್ಯದಲ್ಲಿರುವ ಕೃಷಿ ಮಹಾವಿದ್ಯಾಲಯಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಕೃಷಿ ಮಹಾವಿದ್ಯಾಲಯಗಳೆಷ್ಟು; ಇವುಗಳ ನಿರ್ವಹಣೆಗೆ ವಾರ್ಷಿಕವಾಗಿ ಇಲಾಖೆಯಿಂದ ಬಿಡುಗಡೆ ಮಾಡಲಾಗುತ್ತಿರುವ ಮೊತ್ತವೆಷ್ಟು; (ಮಹಾವಿದ್ಯಾಲಯವಾರು ವಿವರ ನೀಡುವುದು) | ಭಾರತೀಯ ಕೃಷಿ ಅನುಸಂಧಾನ ಪರಿಷತ್ (ICAR) ಮಾನದಂಡದನ್ವಯ ಒಂದು ಕೃಷಿ ಮಹಾವಿದ್ಯಾಲಯ ಸ್ಥಾಪನೆಗೆ ಕನಿಷ್ಠ 50 ಎಕರೆ ಭೂಮಿ, ವಿವಿಧ ಕೃಷಿ ವಿಷಯಗಳನ್ನು ಸ್ನಾತಕ ವಿದ್ಯಾರ್ಥಿಗಳಿಗೆ ಬೋಧಿಸಲು ಕನಿಷ್ಟ 25 ರಿಂದ 30 ಜನ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು ಹಾಗೂ ಪ್ರಾಯೋಗಾಶಾಲೆ ಕ್ಷೇತ್ರ ಕೆಲಸಗಳಿಗೆ ಹಾಗೂ ಕಚೇರಿ ಕೆಲಸಗಳಿಗೆ ಕನಿಷ್ಠ 15 ಶಿಕ್ಷಕೇತರ ಸಿಬ್ಬಂದಿಗಳ ಮಾನವ ಸಂಪನ್ಮೂಲವಿರಬೇಕು. ಮೂಲಭೂತ ಸೌಕರ್ಯಗಳಾದ ಬೋಧನಾ ಕೊಠಡಿಗಳು, ವಸತಿ ನಿಲಯಗಳು, ವಸತಿ ಗೃಹಗಳು ಪ್ರಯೋಗಾಶಾಲೆ, , ಬೆಳೆ ಕೆಫೆಟೇರಿಯಾ, ಸಂಸ್ಕರಣಾ ಕೇಂದ್ರ, ಪಾಲಿ ಹೌಸ್ / ಹಸಿರು ಮನೆ, ಗ್ರಂಥಾಲಯ, ಸ್ಪೋರ್ಟ್ ಕಾಂಪ್ಲೆಕ್ಸ್ ಪ್ರಾತ್ಯಕ್ಷಿಕೆ ತಾಕುಗಳು ಹಾಗೂ ಇನ್ನಿತರ ಸೌಲಭ್ಯಗಳನ್ನು ಹೊಂದಿರಬೇಕು.<br><br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ ಆಯುಕ್ತರು, ಇವರ ಅಧ್ಯಕ್ಷತೆಯಲ್ಲಿ ಪರಿಣಿತ ಸಮಿತಿಯನ್ನು (Expert Committee) ರಚಿಸಲಾಗಿದ್ದು, ಈ ಸಮಿತಿಯು ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ಬಲವರ್ಧನೆ/ ಹೊಸ ಕೃಷಿ ಕಾಲೇಜುಗಳ ಸ್ಥಾಪನೆ ಮತ್ತು ಅವುಗಳ ಇನ್ನಿತರ ಅಭಿವೃದ್ಧಿಗೆ ಅಗತ್ಯವಿರುವ ಅಂಶಗಳನ್ನು ಪರಿಶೀಲಿಸುತ್ತದೆ. ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಹೊಸ ಕೃಷಿ ಕಾಲೇಜುಗಳನ್ನು ಸ್ಥಾಪಿಸುವಂತಹ ಪ್ರಸ್ತಾವನೆಗಳನ್ನು ಈ ಸಮಿತಿಯ ಮುಂದೆ ಸಲ್ಲಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ.<br><br>ರಾಜ್ಯದಲ್ಲಿ ಒಟ್ಟು ನಾಲ್ಕು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿದ್ದು, ಅವುಗಳಡಿ ಬರುವ ಸರ್ಕಾರಿ ಕೃಷಿ ಮಹಾವಿದ್ಯಾಲಯಗಳ ವಿವರವನ್ನು **ಅನುಬಂಧ-1ರಲ್ಲಿ** ಒದಗಿಸಿದೆ. ಪ್ರಸ್ತುತ ರಾಜ್ಯದಲ್ಲಿ ಕೃಷಿ ಇಲಾಖೆಯಿಂದ ಅನುಮೋದಿತ/ಸಂಯೋಜಿತ ಖಾಸಗಿ ಕೃಷಿ ಮಹಾವಿದ್ಯಾಲಯಗಳು ಇರುವುದಿಲ್ಲ. |

| | | |
|---|---|---|
| | | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಒಟ್ಟಾರೆಯಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಮಹಾವಿದ್ಯಾಲಯವಾರು ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ. ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಿದೆ. |
| **(ಆ)** | 2016 ರಿಂದ ಪ್ರಾರಂಭವಾಗಿದ್ದ ಉಡುಪಿ ಜಿಲ್ಲೆಯ ಬ್ರಹ್ಮಾವರ ಕೃಷಿ ಡಿಪ್ಲೊಮಾ ಕಾಲೇಜನ್ನು ರದ್ದುಗೊಳಿಸಲು ಕಾರಣವೇನು; ಇದಕ್ಕೆ ಸಂಬಂಧಿಸಿದ ಇಲಾಖಾ ಕಚೇರಿ ಟಿಪ್ಪಣಿಯೊಂದಿಗೆ ಮಾಹಿತಿ ನೀಡುವುದು; | ರಾಜ್ಯ ಸರ್ಕಾರದಲ್ಲಿ ಇಲ್ಲಿಯವರೆಗೆ ಡಿಪ್ಲೋಮಾ ಕೃಷಿ ಕೋರ್ಸ್‌ನ್ನು ಪೂರ್ಣಗೊಳಿಸಿದವರಿಗೆ ಸರ್ಕಾರಿ ಹುದ್ದೆಯನ್ನು ನೀಡಲು ವೃಂದ ಮತ್ತು ನೇಮಕಾತಿ ನಿಯಮಗಳು ಇರದೇ ಇರುವುದರಿಂದ ಸರ್ಕಾರಿ ನೇಮಕಾತಿಗಳು ಆಗುತ್ತಿರುವುದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ 2 ವರ್ಷ ಕೃಷಿ ಪದವಿಯನ್ನು ಓದಿದ ವಿದ್ಯಾರ್ಥಿಗಳಿಗೆ ಕೃಷಿ ಡಿಪ್ಲೋಮಾ ಪದವಿ ನೀಡಲು ಅವಕಾಶವಿರುತ್ತದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಸಲ್ಲಿಸುವ ಅರ್ಜಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಬೇಡಿಕೆ ಕಡಿಮೆಯಾಗಿರುತ್ತದೆ ಹಾಗೂ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತವಾಗಿ ನಡೆಯುತ್ತಿರುವ ಡಿಪ್ಲೋಮಾ ಕೇಂದ್ರಗಳನ್ನು ಬೇಡಿಕೆಗೆ ಅನುಗುಣವಾಗಿ ಸ್ನಾತಕ ಪದವಿ ಕಾರ್ಯಕ್ರಮ ಎಂದು ಮೇಲ್ದರ್ಜೆಗೆ ಏರಿಸಲು ಸೂಚಿಸಿ ಕೃಷಿ ಡಿಪ್ಲೋಮಾ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 18.06.2022ರಂದು ನಡೆದ 6ನೇ ಪರಿಣಿತರ ಸಮಿತಿಯ ಸಭೆಯಲ್ಲಿ ಹಾಗೂ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ 32ನೇ ಸಮನ್ವಯ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ಬ್ರಹ್ಮಾವರ ಕೃಷಿ ಡಿಪ್ಲೊಮಾ ಕಾಲೇಜನ್ನು ರದ್ದುಗೊಳಿಸಲಾಗಿರುತ್ತದೆ.<br><br>33ನೇ ಸಮನ್ವಯ ಸಮಿತಿಯ ಹಾಗೂ 7ನೇ ಪರಿಣಿತ ಸಮಿತಿ ಸಭೆಯ ತೀರ್ಮಾನದಂತೆ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದಡಿಯ ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ "**ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಕೋರ್ಸ್ ನ್ನು**" ಪ್ರಸ್ತುತ ಲಭ್ಯವಿರುವ ಕಟ್ಟಡ, ಮೂಲ ಸೌಕರ್ಯ ಮತ್ತು ಬೋಧನಾ ಸಿಬ್ಬಂದಿಯನ್ನು ಬಳಸಿಕೊಂಡು ಕೃಷಿ ಡಿಪ್ಲೋಮಾ ಕಾಲೇಜನ್ನು 2024-25ನೇ ಸಾಲಿನಿಂದ ಪುನ: ಪ್ರಾರಂಭಿಸುವಂತೆ ದಿನಾಂಕ: 15-07-2024ರಂದು ಸರ್ಕಾರದ ಅನುಮೋದನೆಯನ್ನು ನೀಡಲಾಗಿರುತ್ತದೆ.<br><br>ಸಭಾ ನಡವಳಿಗಳ ಪ್ರತಿಗಳನ್ನು **ಅನುಬಂಧ -3** ರಲ್ಲಿ ಒದಗಿಸಿದೆ. |

| | | |
|---|---|---|
| (ಇ) | ಸುಮಾರು 1,22,132 ಹೆಕ್ಟೇರು ಬಿತ್ತನೆ ಪ್ರದೇಶ ಹೊಂದಿರುವ ಉಡುಪಿ ಜಿಲ್ಲೆ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಕೃಷಿ ಚಟುವಟಿಕೆಗೆ ಪೂರಕವಾಗಿ, ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಈ ಹಿಂದೆ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆಯೇ; ಈ ಆದೇಶದಂತೆ ಇಲಾಖೆಯಿಂದ ಬಿಡುಗಡೆಯಾದ ಅನುದಾನವೆಷ್ಟು; ಯಾವ ಕಾಮಗಾರಿಗಳಿಗೆ ಈ ಅನುದಾನಗಳನ್ನು ಬಳಸಲಾಗಿದೆ; ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ಯಾರು ಹಾಗೂ ಈವರೆಗೆ ಪಾವತಿಸಿದ ಮೊತ್ತವೆಷ್ಟು; (ಮಾಹಿತಿ ನೀಡುವುದು) | ಉಡುಪಿ ಜಿಲ್ಲೆಯ ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಸರ್ಕಾರದಿಂದ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಹಾಗಾಗಿ ಅನುದಾನ ಬಿಡುಗಡೆಗೊಳಿಸಿರುವ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಈ) | ಈ ಹಿಂದೆ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಇಲಾಖೆಯಿಂದ ಹೊರಡಿಸಿರುವ ಆದೇಶವನ್ನು ಏಕಾಏಕಿ ಹಿಂಪಡೆಯಲು ಕಾರಣವೇನು; ಈಗಿರುವ ಸಂಪನ್ಮೂಲವನ್ನು ಬಳಸಿ ಹೆಚ್ಚುವರಿ ಸಿಬ್ಬಂದಿ ಹಾಗೂ 5 ಕೋಟಿ ಅನುದಾನದೊಂದಿಗೆ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಕೆಳದಿ ಶಿವಪ್ಪ ನಾಯಕ ವಿಶ್ವವಿದ್ಯಾಲಯವು ನೀಡಿರುವ ವರದಿಯು ಇಲಾಖೆಯಲ್ಲಿ ಸ್ವೀಕೃತವಾಗಿದೆಯೇ; ಈ ವರದಿಯ ಆಧಾರದ ಮೇಲೆ ಉಡುಪಿ ಹಾಗೂ ಕರಾವಳಿ ಜಿಲ್ಲೆಗಳ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಬಹುದಾಗಿದ್ದು, ಈ ಕುರಿತು ಸರ್ಕಾರದ ನಿಲುವೇನು; ಈ ಕುರಿತ ಕಡತಗಳು/ಪ್ರಕ್ರಿಯೆ ಯಾವ ಹಂತದಲ್ಲಿ ಇವೆ?(ಮಾಹಿತಿ ನೀಡುವುದು) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ಬಲವರ್ಧನೆ/ ಹೊಸ ಕೃಷಿ ಕಾಲೇಜುಗಳ ಸ್ಥಾಪನೆ ಮತ್ತು ಅವುಗಳ ಇನ್ನಿತರ ಅಭಿವೃದ್ಧಿಗೆ ಅಗತ್ಯವಿರುವ ಅಂಶಗಳನ್ನು ಪರಿಶೀಲಿಸಲು ಪರಿಣಿತ ಸಮಿತಿ (Expert Committee) ರಚಿಸಲಾಗಿದ್ದು, ದಿನಾಂಕ:06-04-2024 ರಂದು ನಡೆದ 7ನೇ ಪರಿಣಿತಿ ಸಮಿತಿ ಸಭೆಯಲ್ಲಿ ಬ್ರಹ್ಮಾವರದಲ್ಲಿ ಪ್ರಸ್ತುತ ಇರುವ ಡಿಪ್ಲೊಮಾ ಕಾಲೇಜನ್ನು ಕೃಷಿ ಪದವಿ ಕಾಲೇಜು ಆಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಮಂಡಿಸಲಾಗಿ, ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಜ್ಞರ ಸಮಿತಿಯು ಸೂಚಿಸಿರುತ್ತದೆ. ಅದರಂತೆ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಇವರ ಅಧ್ಯಕ್ಷತೆಯಲ್ಲಿನ ಪರಿಣಿತ ಸಮಿತಿ (Expert Committee) ಯಲ್ಲಿ ಮಂಡಿಸಿ, ಸಮಿತಿ ನಿರ್ಣಯದನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.<br><br>ಈ ಕುರಿತು ಕಡತವು ಪ್ರಸ್ತುತ ಸರ್ಕಾರದಲ್ಲಿ ಪರಿಶೀಲನಾ ಹಂತದಲ್ಲಿದೆ; |

ಇ-ಸಂಖ್ಯೆ: AGRI/43/AUM/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## ಅನುಬಂಧ-1

| | |
|---|---|
| ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು | 1. ಕೃಷಿ ಮಹಾವಿದ್ಯಾಲಯ, ಜಿ.ಕೆ.ವಿ.ಕೆ, ಬೆಂಗಳೂರು<br>2. ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯ, ಜಿ.ಕೆ.ವಿ.ಕೆ, ಬೆಂಗಳೂರು<br>3. ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿ<br>4. ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯ<br>5. ಕೃಷಿ ಮಹಾವಿದ್ಯಾಲಯ, ಹಾಸನ<br>6. ಕೃಷಿ ಮಹಾವಿದ್ಯಾಲಯ, ಚಾಮರಾಜನಗರ |
| ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ | 1. ಕೃಷಿ ಮಹಾವಿದ್ಯಾಲಯ, ಧಾರವಾಡ<br>2. ಕೃಷಿ ಮಹಾವಿದ್ಯಾಲಯ, ವಿಜಯಪುರ<br>3. ಕೃಷಿ ಮಹಾವಿದ್ಯಾಲಯ, ಹನುಮನಹಟ್ಟಿ<br>4. ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ<br>5. ಅರಣ್ಯ ಮಹಾವಿದ್ಯಾಲಯ, ಶಿರಸಿ |
| ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು | 1. ಕೃಷಿ ಮಹಾವಿದ್ಯಾಲಯ, ರಾಯಚೂರು<br>2. ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು<br>3. ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ<br>4. ಕೃಷಿ ಮಹಾವಿದ್ಯಾಲಯ, ಕಲಬುರಗಿ<br>5. ಕೃಷಿ ಮಹಾವಿದ್ಯಾಲಯ, ಗಂಗಾವತಿ (ಕೊಪ್ಪಳ)<br>6. ಕೃಷಿ ಮಹಾವಿದ್ಯಾಲಯ, ಹಗರಿ |
| ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ | 1. ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ ಮತ್ತು ಇರುವಕ್ಕಿ<br>2. ತೋಟಗಾರಿಕೆ ಮಹಾವಿದ್ಯಾಲಯ, ಹಿರಿಯೂರು<br>3. ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ<br>4. ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ |

***

**ಅನುಬಂಧ-2**

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ 2023-24ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕೃವಿವಿ | ಸಹಾಯಾನುದಾನ ವೇತನ | ಸಹಾಯಾನುದಾನ ಸಾಮಾನ್ಯ | ಸಹಾಯಾನುದಾನ ಗುತ್ತಿಗೆ/ ಹೊರಗುತ್ತಿಗೆ ವೇತನ | ಸಹಾಯಾನುದಾನ ವಿಶ್ರಾಂತಿ ವೇತನ | ಪರಿಶಿಷ್ಟ ಜಾತಿ ಉಪ ಯೋಜನೆ | ಗಿರಿಜನ ಉಪ ಯೋಜನೆ | ನಬಾರ್ಡ್ |
|---|---|---|---|---|---|---|---|---|
| 1. | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು | 12966.00 | 1006.13 | 1583.96 | 14112.92 | 258.00 | 105.00 | 612.85 |
| 2. | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ | 12580.65 | 1108.68 | 940.72 | 8572.61 | 258.00 | 35.00 | 535.00 |
| 3. | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು | 7731.00 | 663.21 | 690.48 | 2151.84 | 86.00 | 35.00 | 471.40 |
| 4. | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ | 5215.40 | 454.11 | 592.54 | 1595.96 | 258.00 | 105.00 | -- |

***

ಅನುಬಂಧ-3

**Proceeding of the 5th Meeting of the Expert Committee to suggest a roadmap for strengthening of Farm Universities in Karnataka held under the Chairpersonship of Additional Chief Secretary and Development Commissioner of Govt. of Karnataka on 18-12-2019 at 2.30 P.M.**

**Members Present:**

1. Smt. Vandita Sharma, IAS, Additional Chief Secretary and Development Commissioner, Vidhana Soudha, Bengaluru - Chairperson
2. Shri. Rajender Kumar Kataria, IAS, Secretary to Government, Department of Agriculture and Department of Horticulture, M.S. Building, Bengaluru
3. Dr. S.Rajendra Prasad, Vice Chancellor, UAS, GKVK, Bengaluru
4. Dr. K.N.Kattimani, Vice Chancellor, UAS, Raichur
5. Dr. M.B.Chetti, Vice Chancellor, UAS, Dharwad
6. Dr. M.K.Naik, Vice Chancellor, UA&HS, Shivamogga
7. Dr. K.M.Indiresh, Vice Chancellor, UHS, Bagalkot
8. Dr. V.R.Kiresur, Registrar. UAS, Dharwad
9. Dr. B.V.Shivaprakash, Director Research, KVA&FSU, Bidar
10. Dr. B.N.Shivaram, Additional Director, Dept.of Animal Husbandry, Bengaluru
11. Shri. Sharanabasappa Matur, Section Officer, Dept. of Animal Husbandry, Bengaluru
12. Dr. Mahabaleshwar Hegde, Registrar, UAS, Bengaluru - Member Secretary

The Additional Chief Secretary and Development Commissioner and the Chairperson welcomed all the members and sought deliberations on various issues of Farm Universities in Karnataka including establishment of New Agricultural colleges.

The Committee was briefed about the various degree programmes offered in three (3) Farm Universities; one Horticulture University; one Agriculture and Horticulture University and one Animal & Veterinary Science University in the State.

1. Nearly 4000 Graduates and 1000 Post Graduates get admitted every year
2. The vacancy in the line of teaching faculty is to the extent of 30 to 50% and the other personnel is to the extent of 60 to 70% in different Universities and Colleges.
3. Except salary component, the budget sanction for other establishment charges is dwindling for the past 3 years.
4. The intake of students every year is increased by 10%, while hostel facilities are limited.

The Chairperson expressed her concern about providing quality education and also job opportunities for the passing out students.

All the Vice Chancellors apprised the Chairperson that, the Universities are able to manage and impart quality education in spite of dwindling faculty and budget with the new initiatives like start up programmes, skilled training under ICAR READY programmes, World Bank aided projects and the assistance from outside funded projects handled by the Teachers and Scientists. At the same time, the Vice Chancellors opined that with the increased staff vacancy every year due to retirement of teachers and staff, disproportionate sanction and non-filling up of vacant posts is greatly affecting the functioning of the University and the Colleges.

It was informed that, at present there are ample job opportunities for Agricultural especially in private production units, Agriculture and food industries etc.

**Starting of New Agriculture, Horticulture and Veterinary Colleges :-**

In respect of starting of new colleges, the Secretary to Govt., Dept. of Agriculture, categorically stated that, without sanction of faculty and budget for establishment of infrastructure, the proposal of new colleges will have no justification and ultimately the students are the sufferers. He quoted the examples of CoA, Chamarajanagar, CoH, Hassan, and College of Horticulture Engineering and Food Technology, Devihosur, Haveri etc., where the Universities were permitted to start colleges with the condition that no extra faculty and budget for infrastructure will be provided and they have to manage by redeployment of staff in the Universities and by using the existing infrastructure.

**The recommendations of the expert committee:**

Finally, the Chairperson took stock of the present activities initiated in all the Farm Universities and made a reference to Dr.Bisallaiah Committee reports in the year 2012 and the recommendations of a High Power Committee headed by Dr.S.Aiyappan in the year 2019 to formulate a road map for functioning of Farm Universities in the State. After elaborate discussion with all the Vice Chancellors and Members of the Committee, the following decisions were taken;

1. Priority should be given for filling up of the vacant positions in the Universities.

2. Additional budget for strengthening infrastructure like expansion of hostel accommodation, establishment of virtual class rooms, well equipment of the laboratories etc., need to be sanctioned.

3. In order to examine the issue for the establishment of new colleges, the Chairperson asked the department to put up a note on the various constraints that are being faced by the existing universities and colleges along with a clear chart of all the amenities and staff requirement that are mandatory to open a new college. Against this chart, they should provide the details of availability of the amenities and also those areas where they are lacking. This should be put up on file to the Hon'ble Minister for Agriculture before the recommendation is put up by the department to this committee.

**General Decisions:**

1. The Chairperson suggested to include Finance Secretary, Govt. of Karnataka as a member in the Expert Committee.

2. All the Farm Universities should concentrate on training and equipping the students to take up self-employment, establish start up programme and become Agri entrepreneurs.

3. The Committee approved the request of Vice Chancellor, UA&HS, Shivamogga to shift part of the degree programmes to newly established University campus near Ananthapuram, Sagar Taluk in a phased manner.

The meeting ended with vote of thanks.

Draft approved by the Additional Chief Secretary &
Dev. Commissioner of Govt. of Karnataka

23/01/2020

**REGISTRAR &**
**MEMBER CONVENER**
REGISTRAR
UNIVERSITY OF AGRICULTURAL SCIENCES
GKVK. CAMPUS. BENGALURU - 560 065

Copy submitted to :
The Chairperson and all Members of the Expert Committee to suggest the roadmap for Strengthening the Farm Universities in Karnataka

Copy to : concerned file.

**Proceedings of the 6th Meeting of the Expert Committee to suggest the roadmap for strengthening the Farm Universities in Karnataka held under the Chairmanship of the Additional Chief Secretary to Government and Development Commissioner, Govt. of Karnataka on 18th June, 2022 at 4.15 PM at Room No.306, 3rd Floor, Vidhana Soudha, Bengaluru**

---

**Members Present:**

| | | |
|---|---|---|
| 1 | **Sri. I.S.N. Prasad, IAS,**<br>Additional Chief Secretary to Government & Development Commissioner | Chairman |
| 2 | **Sri. Rajender Kumar Kataria, IAS,**<br>Principal Secretary to Government, Horticulture Department | Member |
| 3 | **Sri. Shivayogi C. Kalasad, IAS,**<br>Secretary to Government, Agriculture Department | Member |
| 4 | **Dr. M. Hanumanthappa,**<br>Vice-Chancellor (I/c) & Director of Education, KSN University of Agricultural & Horticultural Sciences, Shivamogga | Member |
| 5 | **Sri. Shivananda, KAS,**<br>Registrar and representative of Vice-Chancellor, University of Agricultural Sciences, Dharwad | Member |
| 6 | **Dr. M.G. Patil,**<br>Director of Education and representative of Vice-Chancellor, University of Agricultural Sciences, Raichur | Member |
| 7 | **Dr. Ashok S Alur,**<br>Director, COE- FPO and representative of Vice-Chancellor, University of Horticultural Sciences, Bagalkot | Member |
| 8 | **Dr. Arun Kumar,**<br>HoD, Dairy Science, Bengaluru, - representative of Vice-Chancellor, KVAFSU, Bidar | Member |
| 9 | **Dr. Basave Gowda**<br>Registrar and representative of Vice-Chancellor, UAS, GKVK, Bangalore | Member-Secretary |

At the outset, Sri Shivayogi C. Kalasad, IAS, Secretary to Government, Agriculture Department, Government of Karnataka extended warm welcome to Additional Chief Secretary to Government and Development Commissioner; Principal Secretary to Govt., Horticulture Department, Vice-Chancellors of Farm Universities, Directors and Officers of Farm Universities present in the Meeting. After detailed deliberations the following decisions were taken;

**Item No.1: Confirmation of the proceedings and action taken report on 5th Meeting of the Expert Committee held on 18th December, 2019.**

The Committee reviewed the proceedings of 5th meeting of Expert Committee held on 18th December, 2019 and action taken report thereon and confirmed the same.

**Item No.2: Discussion on the proposals received for establishment of new Agricultural Colleges at Farm Universities in Karnataka**

The Chairman and Committee Members expressed that, more than 50% posts are vacant in all the Farm Universities of Karnataka and newly established colleges like College of Agriculture, Chamarajanagara; College of Agricultural Engineering, GKVK, Bengaluru and College of Agriculture Gangavathi, have not yet been provided with adequate faculty members and other infrastructure to provide quality education. In view of this, **the Chairman advised to strengthen the existing colleges before starting of new colleges.** ***(Action: VCs of all Farm Universities in Karnataka/ Secretary to Govt., Agriculture Department, GoK)***

**Item No.3: Discussion on proposals received for starting of new degree programmes at Farm Universities in Karnataka**

- The new degree programme proposed by UAS, Bangalore "B.Sc.(Hons.) in Food Nutrition and Dietetics" is approved without any financial commitment and advised to run the said programme by utilizing existing facilities at the University from the academic year 2022-23. ***(Action: VC, UAS Bangalore)***

- It was suggested to submit the proposal for strengthening the faculties for running newly sanctioned College of Agriculture, at Hagari, Ballari. ***(Action: VC, UAS, Raichur)***

- The Committee decided to discontinue the Agricultural Diploma Courses offered by the Universities since these courses are not more useful and also not supported by the State Government. Further, the Committee advised to upgrade the degree programmes depending on the demand and facilities available in respective University. ***(Action: VCs of all Farm Universities in Karnataka)***

- The Chairman has advised all the Farm Universities to concentrate and focus more on research activities, which is more useful to the farming community. ***(Action: VCs of all Farm Universities in Karnataka)***

- The proposal to start new degree programmes like B.Sc(Hons) Agriculture and B.Sc.(Hons) Forestry in the newly established Campus of KSNUAHS (Keladi Shivappa Naika University of Agricultural & Horticultural Sciencies) at Iruvakki, Sagar Taluk, Shivamogga, without any financial assistance for construction of buildings etc., was approved. ***(Action: VC, KSNUAHS Shivamogga)***

Finally, the meeting concluded with vote of thanks.

(I.S.N.PRASAD)
Addl. Chief Secretary &
Development Commissioner

**ದಿನಾಂಕ 6ನೇ ಏಪ್ರಿಲ್, 2024 ರಂದು ಮಧ್ಯಾಹ್ನ 12.00 ಗಂಟೆಗೆ ಕೊಠಡಿ ಸಂಖ್ಯೆ 306, 3ನೇ ಮಹಡಿ, ವಿಧಾನಸೌಧ, ಬೆಂಗಳೂರಿನಲ್ಲಿ ನಡೆದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳನ್ನು ಬಲಪಡಿಸುವ ಮಾರ್ಗಸೂಚಿಯ ಕುರಿತ 7 ನೇ ತಜ್ಞರ ಸಮಿತಿಯ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1 | **ಡಾ. ಶಾಲಿನಿ ರಜನೀಶ್, ಐಎಎಸ್,**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಸರ್ಕಾರ ಕರ್ನಾಟಕ, ಬೆಂಗಳೂರು | ಅಧ್ಯಕ್ಷರು |
| 2 | **ಶ್ರೀ. ಅನ್ಬುಕುಮಾರ್, ಐಎಎಸ್**<br>ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು (ಆನ್‌ಲೈನ್) | ಸದಸ್ಯರು |
| 3 | **ಡಾ ಎಸ್.ವಿ. ಸುರೇಶ**<br>ಉಪಕುಲಪತಿಗಳು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು | ಸದಸ್ಯರು |
| 4 | **ಡಾ.ಪಿ.ಎಲ್. ಪಾಟೀಲ್**<br>ಉಪಕುಲಪತಿಗಳು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ | ಸದಸ್ಯರು |
| 5 | **ಡಾ.ಎಂ.ಹನುಮಂತಪ್ಪ,**<br>ಉಪಕುಲಪತಿಗಳು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ರಾಯಚೂರು | ಸದಸ್ಯರು |
| 6 | **ಡಾ.ಆರ್.ಸಿ. ಜಗದೀಶ**<br>ಉಪಕುಲಪತಿಗಳು, ಕೆಎಸ್‌ಎನ್ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ | ಸದಸ್ಯರು |
| 7 | **ಡಾ.ಕೆ. ಸಿ. ವೀರಣ್ಣ,**<br>ಉಪಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ | ಆಹ್ವಾನಿತ ಸದಸ್ಯರು |
| 8 | **ಡಾ.ವಿಷ್ಣುವರ್ಧನ**<br>ಉಪಕುಲಪತಿಗಳು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ | ಆಹ್ವಾನಿತ ಸದಸ್ಯರು |
| 9 | **ಡಾ. ಜಿ. ವಿ ಪುತ್ರ**<br>ಕೃಷಿ ನಿರ್ದೇಶಕರು, ಸರ್ಕಾರ ಕರ್ನಾಟಕ, ಬೆಂಗಳೂರು | ಆಹ್ವಾನಿತ ಸದಸ್ಯರು |
| 10 | **ಶ್ರೀಮತಿ. ರಶ್ಮಿ ಶ್ರೀಕಾಂತ್ ಗಜರೆ**<br>ಸರ್ಕಾರದ ಜಂಟಿ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬೆಂಗಳೂರು | ಸದಸ್ಯರು |
| 11 | **ಡಾ ಬಸವೇಗೌಡ**<br>ಕುಲಸಚಿವರು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು | ಸದಸ್ಯ-ಕಾರ್ಯದರ್ಶಿ |

ಡಾ. ಬಸವೇಗೌಡ, ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಸಭಾ ಕಾರ್ಯಸೂಚಿಗಳನ್ನು ಮಂಡಿಸಿ, ಸಭೆಯನ್ನು ನಡೆಸಿಕೊಡಲು ಅಧ್ಯಕ್ಷರನ್ನು ಮನವಿ ಮಾಡಿದರು.

ವಿಷಯ ಸಂಖ್ಯೆ.1: 18–06–2022 ರಂದು ನಡೆದ 6 ನೇ ತಜ್ಞರ ಸಮಿತಿ ಸಭೆಯ ನಡವಳಿಗಳ ದೃಢೀಕರಣ ಮತ್ತು ಕ್ರಮವನ್ನು ಕೈಗೊಂಡ ವರದಿ 2022 ರ ಜೂನ್ 18 ರಂದು ನಡೆದ 6 ನೇ ತಜ್ಞರ ಸಮಿತಿಯ ಸಭೆಯ ನಡಾವಳಿಗಳನ್ನು ಪರಿಶೀಲಿಸಿದ ನಂತರ ಸಮಿತಿಯು ಅದರ ಮೇಲೆ ಕ್ರಮ ತೆಗೆದುಕೊಳ್ಳಲಾದ ವರದಿಯನ್ನು ಈ ಕೆಳಗಿನ ಸಲಹೆಗಳೊಂದಿಗೆ ದೃಢಪಡಿಸಲಾಯಿತು

- ಚಾಮರಾಜನಗರ ಮತ್ತು ಗಂಗಾವತಿಯಲ್ಲಿ ಹೊಸದಾಗಿ ಸ್ಥಾಪಿಸಲಾದ ಕೃಷಿ ಮಹಾವಿದ್ಯಾಲಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅವುಗಳಿಗೆ ಅಗತ್ಯ ಮಾನವ ಸಂಪನ್ಮೂಲ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಹಣಕಾಸಿನ ನೆರವು ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

  **(ಕ್ರಮ: ಕುಲಪತಿಗಳು, ಕೃವಿವಿ, ಬೆಂಗಳೂರು, ರಾಯಚೂರು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

- ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 (NFHS –5) ರ ಪ್ರಕಾರ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ 36% ಮಕ್ಕಳು ಕುಂಠಿತರು, 32% ಕಡಿಮೆ ತೂಕ ಮತ್ತು 3% ಹೆಚ್ಚು ತೂಕವನ್ನು ಹೊಂದಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ 26.3% ಮತ್ತು ನಗರ ಪ್ರದೇಶಗಳಲ್ಲಿ 15.1% ಮಹಿಳೆಯರು ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅಪೌಷ್ಟಿಕತೆ ಮತ್ತು ಆರೋಗ್ಯ ಶಿಕ್ಷಣ, ಆರೋಗ್ಯ ತಪಾಸಣೆ ಮತ್ತು ರೆಫರಲ್ ಸೇವೆಗಳು ಇತ್ಯಾದಿ ವಿಷಯಗಳ ಸಂಬಂಧ ಕೃವಿವಿ, ಬೆಂಗಳೂರಿನಂತೆ ಕರ್ನಾಟಕದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ "ಆಹಾರ ಪೋಷಣೆ ಮತ್ತು ಆಹಾರ ಪದ್ಧತಿ" ಪದವಿ ಕೋರ್ಸ್ ಅನ್ನು ಪ್ರಾರಂಭಿಸಲು ಸಲಹೆ ನೀಡಲಾಯಿತು. ಇದಲ್ಲದೆ, ಸಮಿತಿಯು ಆಯುಷ್ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಲಹೆ ನೀಡಿದರು.

  **(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು / ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

- ಕೃಷಿ ಕ್ಷೇತ್ರದಲ್ಲಿನ ಸ್ಟಾರ್ಟ್‌ಅಪ್‌ಗಳು, ನವೋದ್ಯಮಿಗಳು ಮತ್ತು ಉದ್ಯಮಿಗಳಿಗೆ ತಂತ್ರಜ್ಞಾನದ ನೆರವು ನೀಡಲು ಸಾಧ್ಯವಾಗುವಂತೆ ಕೃಷಿ ವಿಶ್ವವಿದ್ಯಾಲಯಗಳ ಇನ್‌ಕ್ಯುಬೇಶನ್ ಕೇಂದ್ರಗಳನ್ನು ಬಲಪಡಿಸಲು ಇನ್ನೋವೇಶನ್/ಸ್ಟಾರ್ಟ್‌ಅಪ್ ನೆರವಿನ ಅಡಿಯಲ್ಲಿ ಕರ್ನಾಟಕ ಐಟಿ–ಬಿಟಿ ಇಲಾಖೆಯಿಂದ ನೆರವು ಪಡೆಯಲು ಅಧ್ಯಕ್ಷರು ಸಲಹೆ ನೀಡಿದರು.

  (ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು, ನಿರ್ದೇಶಕರು, ಐ.ಟಿ.ಬಿ.ಟಿ.)

- ರಾಜ್ಯದಲ್ಲಿ ಎಫ್‌ಪಿಓಗಳ ಕಾರ್ಯಚಟುವಟಿಗಳ ಬಗ್ಗೆ ಪ್ರಾಯೋಗಿಕ ಜ್ಞಾನವನ್ನು ಪಡೆಯಲು ರೈತ ಉತ್ಪಾದಕರ ಸಂಸ್ಥೆಗೆ (ಎಫ್‌ಪಿಓ) ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು

ನಿಯೋಜಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು. PDS, MGNREGA, ಸ್ಕಾಲರ್‌ಶಿಪ್‌ಗಳು ಮತ್ತು ಪಿಂಚಣಿಗಳು, ನಬಾರ್ಡ್, ಮುಂತಾದ ವಿವಿಧ ಯೋಜನೆಗಳು, ಸಾಲಗಳು, ಸೇವೆಗಳ ಬಗ್ಗೆ ವಿದ್ಯಾರ್ಥಿಗಳು ರೈತ ಸಮುದಾಯಕ್ಕೆ ಮಾಹಿತಿಯನ್ನು ನೀಡುವ ಮೂಲಕ ಸೇವೆ ಸಲ್ಲಿಸಬಹುದಾಗಿರುತ್ತದೆ. ಕುಡಿಯುವ ನೀರು, ನೈರ್ಮಲ್ಯ, ಆರೋಗ್ಯದಂತಹ ಕಾರ್ಯಕ್ರಮಗಳ ಬಗ್ಗೆ ನಬಾರ್ಡ್ ನಿಧಿಯ ನೆರವಿನೊಂದಿಗೆ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ನಿರ್ಧರಿಸಲಾಯಿತು.

**(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

- ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ ಹೊಸದಾಗಿ ಸ್ಥಾಪಿಸಲಾದ ಕೃಷಿ ಮಹಾವಿದ್ಯಾಲಯವನ್ನು ಬಲಪಡಿಸಲು ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಬೆಂಬಲಕ್ಕಾಗಿ ನೆರವು ಕೋರಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರ್ಗಿ ಇವರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

  **(ಕ್ರಮ: ಕುಲಪತಿಗಳು, ಕೃವಿವಿ, ರಾಯಚೂರು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

- ಕೃಷಿ ಸಂಬಂಧಿತ ವಿಶ್ವವಿದ್ಯಾನಿಲಯಗಳು ಅಭಿವೃದ್ಧಿಪಡಿಸಿದ ಹೊಸ ತಳಿಗಳು/ತಂತ್ರಜ್ಞಾನಗಳನ್ನು ದೊಡ್ಡ ಮಟ್ಟದಲ್ಲಿ ವಾಣಿಜ್ಯೀಕರಣ ಮಾಡಲು ವಿವಿಧ ಖಾಸಗಿ ಏಜೆನ್ಸಿಗಳೊಂದಿಗೆ ಹೆಚ್ಚಿನ ಸಹಯೋಗ/ಪಾಲುದಾರಿಕೆಯನ್ನು ಹೊಂದಲು ಸೂಚಿಸಲಾಯಿತು.

  **(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು)**

- ಕೃಷಿ ವಿಶ್ವವಿದ್ಯಾನಿಲಯಗಳಿಗೆ ಆದಾಯವನ್ನು ಹೆಚ್ಚಿಸಲು, ಹೆಚ್ಚಿನ ಶುಲ್ಕದೊಂದಿಗೆ ಪೂರಕ ಸೀಟುಗಳನ್ನು ಹೆಚ್ಚಿಸಲು ಸೂಚಿಸಲಾಯಿತು.

  **(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು)**

**ವಿಷಯ ಸಂಖ್ಯೆ.2: ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಇರುವಕ್ಕಿಯ ಮುಖ್ಯ ಆವರಣದಲ್ಲಿ ಹೊಸ ಕೃಷಿ ಕಾಲೇಜು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆಯ ಬಗ್ಗೆ:-**

- ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಇರುವಕ್ಕಿ ಆವರಣದಲ್ಲಿ ಸರ್ಕಾರದ ಯಾವುದೇ ಆರ್ಥಿಕ ಮತ್ತು ಮಾನವ ಸಂಪನ್ಮೂಲ ಬೆಂಬಲವಿಲ್ಲದೆ ಹೊಸ ಕೃಷಿ ವಿಜ್ಞಾನಗಳ ಕಾಲೇಜು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು. **(ಕ್ರಮ: ಕುಲಪತಿಗಳು, ಕೆಶಿನಾಕೃತೋವಿವಿ, ಶಿವಮೊಗ್ಗ/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

**ವಿಷಯ ಸಂಖ್ಯೆ 3: ಕರ್ನಾಟಕದ ಪ್ರತಿ ಕೃಷಿ ವಿಶ್ವವಿದ್ಯಾಲಯಗಳಿಂದ ಒಂದು ಡಿಪ್ಲೊಮಾ ಕೋರ್ಸ್ ಅನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆಯ ಬಗ್ಗೆ:-**

- ತಜ್ಞರ ಸಮಿತಿಯು ಕರ್ನಾಟಕದ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳಲ್ಲಿ, ಈಗಾಗಲೇ ಲಭ್ಯವಿರುವ ಮೂಲಸೌಕರ್ಯ ಮತ್ತು ಮಾನವಶಕ್ತಿಯನ್ನು ಬಳಸಿಕೊಂಡು ಒಂದು ಡಿಪ್ಲೊಮಾ ಕೋರ್ಸ್ ಅನ್ನು ಪ್ರಾರಂಭಿಸಲು, ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ, ಆಡಳಿತಾತ್ಮಕ ಆದೇಶವನ್ನು ಹೊರಡಿಸಲು ಒಪ್ಪಿಗೆ ನೀಡಲಾಯಿತು.

**(ಕ್ರಮ: ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

**ವಿಷಯ ಸಂಖ್ಯೆ.4: ಕರ್ನಾಟಕದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮತ್ತು ಮೂಲಸೌಕರ್ಯಗಳನ್ನು ಬಲಪಡಿಸಲು ಒಂದು ಬಾರಿ ಅನುದಾನಕ್ಕಾಗಿ ಪ್ರಸ್ತಾವನೆಯ ಕುರಿತು:-**

- ಸಂಶೋಧನೆ ಮತ್ತು ಮೂಲಸೌಕರ್ಯಗಳನ್ನು ಬಲಪಡಿಸುವ ಕುರಿತು ಕರ್ನಾಟಕದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳಿಂದ ಕ್ರೋಢೀಕೃತ ಪ್ರಸ್ತಾವನೆಯನ್ನು ಸಲ್ಲಿಸಲು ತಜ್ಞರ ಸಮಿತಿಯು ಸೂಚಿಸಿತು.

**(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

**ವಿಷಯ ನಂ.5: ಕತ್ತಲಗೆರೆ ಮತ್ತು ಬ್ರಹ್ಮಾವರದಲ್ಲಿ ಪ್ರಸ್ತುತ ಇರುವ ಡಿಪ್ಲೊಮಾ ಕಾಲೇಜುಗಳನ್ನು ಕೃಷಿ ಪದವಿ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಲು ಮನವಿ :-**

- ಮೇಲಿನ ವಿಷಯದ ಕುರಿತು ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತಜ್ಞರ ಸಮಿತಿಯು ಸೂಚಿಸಿತು.

**(ಕ್ರಮ: ಕುಲಪತಿಗಳು, ಕೆಶಿನಾಕೃತೋವಿವಿ, ಶಿವಮೊಗ್ಗ/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

**ಚರ್ಚಿಸಲಾದ ಇತರೆ ವಿಷಯಗಳು:**

1. ಕರ್ನಾಟಕದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳಿಂದ NABARD-RIDF ನಿಧಿಯಡಿಯಲ್ಲಿ ಸೌರ ಆಧಾರಿತ ಶೀತಲ ಶೇಖರಣೆಗಳ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು.

   **(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

2. ವಿವಿಧ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ಕಾಯಿಲೆಗಳ ಅವಶ್ಯಕತೆ ಇರುವ ಪ್ರಾಣಿಗಳಿಗೆ ಚಿಕಿತ್ಸೆ ನೀಡಲು ಅತ್ಯಾಧುನಿಕ ಸೌಲಭ್ಯವನ್ನು ಕಲ್ಪಿಸಲು, ಸರ್ಕಾರದ ಯಾವುದೇ ಹಣಕಾಸಿನ ನೆರವಿಲ್ಲದೆ ಬೆಂಗಳೂರಿನ ಹೆಬ್ಬಾಳದ ಮುಖ್ಯ ಸಂಶೋಧನಾ ಕೇಂದ್ರದಲ್ಲಿ Super Specialty Companion Animals Hospital ಯನ್ನು ಸ್ಥಾಪಿಸುವ ಪ್ರಸ್ತಾವನೆಗೆ ಸಮಿತಿಯು ತಾತ್ವಿಕವಾಗಿ ಅನುಮೋದನೆ ನೀಡಿತು. ಈ ಕೇಂದ್ರವು ಕರ್ನಾಟಕ ಮತ್ತು ನೆರೆಯ ರಾಜ್ಯಗಳ ಅನಾರೋಗ್ಯದ ಪ್ರಾಣಿಗಳಿಗೆ ರೋಗ ನಿರ್ವಹಣೆ ಮತ್ತು ಚಿಕಿತ್ಸೆಯನ್ನು ಒದಗಿಸುವುದು. ಅಲ್ಲದೆ, ಈ ಕೇಂದ್ರವು, ಪಶುವೈದ್ಯಕೀಯದ ಬಗ್ಗೆ ಸಂಶೋದನೆ, ತರಬೇತಿ ಮತ್ತು ವಿಸ್ತರಣಾ ಚಟುವಟಿಕೆಗಳ ಸಂಬಂಧ ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕೆಲಸ ನಿರ್ವಹಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.
**(ಕ್ರಮ: ಕುಲಪತಿಗಳು, ಕಪಪಮಿವಿವಿ, ಬೀದರ್/ ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ)**

3. ಕೃಷಿ ಇಲಾಖೆ ವ್ಯಾಪ್ತಿಯ ಕೂಡ್ಲಿಗಿ ತಾಲೂಕಿನ ಗುಂಡಿನ ಹೊಳೆ ಪ್ರದೇಶದ ಕೃಷಿ ಬೀಜ ಉತ್ಪಾದನಾ ಕೇಂದ್ರದ ಭೂಮಿಯನ್ನು, ಕೃವಿವಿ ರಾಯಚೂರು ಇದರ ಅಧೀನದಲ್ಲಿ ಕೃಷಿ ವಿಜ್ಞಾನ ಕೇಂದ್ರವನ್ನು ಆರಂಭಿಸುವ ಸಲುವಾಗಿ ಹಸ್ತಾಂತರಿಸಲು ಹಾಗೂ ಈ ಬಗ್ಗೆ ಐಸಿಎಆರ್ ಗೆ ಪ್ರಸ್ತಾವನೆ ಸಲ್ಲಿಸಲು ತಾತ್ವಿಕವಾಗಿ ಒಪ್ಪಲಾಯಿತು.
**(ಕ್ರಮ: ಕುಲಪತಿಗಳು, ಕೃವಿವಿ, ರಾಯಚೂರು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

4. ಕೃಷಿ ಸಂಬಂಧಿತ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳ ಅಡಿಯಲ್ಲಿ ಮಧ್ಯಂತರ ಪರಿಹಾರವನ್ನು (I.R.) ವಿಸ್ತರಿಸುವ ಸರ್ಕಾರದ ಆದೇಶವನ್ನು ಸಭೆಯ ಗಮನಕ್ಕೆ ತಂದು ಇದನ್ನು ವಿಶ್ವವಿದ್ಯಾಲಯಗಳಿಗೆ ಭರಿಸಲು ಕಷ್ಟವಾಗುತ್ತದೆಯೆಂದು ಅಧ್ಯಕ್ಷರ ಗಮನಕ್ಕೆ ತರಲಾಯಿತು ಮತ್ತು ಇದಕ್ಕಾಗಿ ಸರ್ಕಾರದಿಂದ ಬಜೆಟ್ ಒದಗಿಸಲು ವಿನಂತಿಸಲಾಯಿತು. ಈ ಸಮಸ್ಯೆಯ ಬಗ್ಗೆ ವಿವರವಾದ ಟಿಪ್ಪಣಿಯನ್ನು ಸಲ್ಲಿಸಲು ಸೂಚಿಸಲಾಯಿತು.

**(ಕ್ರಮ: ರಾಜ್ಯದ ಎಲ್ಲಾ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳು/ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

ಅಂತಿಮವಾಗಿ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**(ಡಾ. ಶಾಲಿನಿ ರಜನೀಶ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಭಿವೃದ್ಧಿ ಆಯುಕ್ತರು